'ಹ್ಹ..ಹ್ಹ..ಹ್ಹ ಮೇಷ್ಟ್ರೆ? ಮಾರ್ಫಾಳಿಗೆ ಚುಂಬಿಸುತ್ತಿದ್ದಿರಾ?' ಅಂತಾನೆ! ಏನನ್ನೋಣ! ಆ ಅಡುಗೆಯ ಮಾರ್ಫಾಳೋ, ಒಳ್ಳೇ ತಿಮಿಂಗಿಲ ಇದ್ದಾಗಿದ್ದಾಳೆ. ಅವಳಿಗೆ ನಾನು ಚುಂಬಿಸುತ್ತಿದ್ದೆ ಅಂತಾನಲ್ಲ ಭಡವ!''

''ಯಾರಪ್ಪ ಭಡವ?'' ಕೇಳುತ್ತಾ ಅವರನ್ನು ಸೇರಿಕೊಂಡ ಗಣಿತ ಶಿಕ್ಷಕ ಟರಂಟುಲೊವ್.

''ಅವನೇ, ಅಲ್ಲಿ ನಿಂತ್ಕೊಂಡಿದ್ದಾನಲ್ಲ ವ್ಯಾಂಕಿನ್! ನಾನು ಏನು ನಡಿತಿದೆ ನೋಡೋಣವೆಂದು ಅಡುಗೆ ಮನೆ ಕಡೆಗೆ ಹೋಗಿದ್ದಾ...'' ಎಂದು ಅಹಿನೀವ್ ಮತ್ತೊಮ್ಮೆ ವಿವರಿಸಿದ.

''ಹೋಗಿ ಹೋಗಿ ಆ ಮಾರ್ಫಾಳಿಗೆ ಚುಂಬಿಸುತ್ತಿದ್ದೆ ಅಂತಾನಲ್ಲ ದರಿದ್ರದವನು! ಮಾರ್ಫಳಿಗೆ ಚುಂಬಿಸುವುದಕ್ಕಿಂತ ಒಂದು ಕಜ್ಜಿ ನಾಯಿಯನ್ನು ಚುಂಬಿಸೇನು.'' ಎನ್ನುತ್ತಾ ಸುತ್ತ ನೋಡಿದ. ಅವನಿಗೆ ಆದಾಯ ತೆರಿಗೆ ಅಧಿಕಾರಿ ಮಾಜ್ಞ ಬಂದು ನಿಂತಿರುವುದು ಕಾಣಿಸಿತು.

''ನಾವು ವ್ಯಾಂಕಿನನ ಬಗ್ಗೆ ಮಾತನಾಡುತ್ತಿದ್ದೆವು.'' ಅವನು ಮಾಜ್ಞನಿಗೆ ವಿವರಿಸಿದ.

''ಅವನೊಬ್ಬ ಅರೆಹುಚ್ಚ. ನಾನು ಅಡುಗೆಮನೆಯಲ್ಲಿ ಮಾರ್ಫಾಳ ಬಳಿ ನಿಂತಿರುವುದನ್ನು ನೋಡಿ ಏನೇನೋ ಕಟ್ಟು ಕಥೆಗಳನ್ನು ಹುಟ್ಟಿಸಿ ಹೇಳುತ್ತಿದ್ದಾನೆ. ಕುಡಿದಿದ್ದು ಸ್ವಲ್ಪ ಹೆಚ್ಚಾಗಿರಬೇಕೇನೋ! 'ಏನು ಮೇಷ್ಟ್ರೇ, ಮಾರ್ಫಳನ್ನು ಲೊಚಲೊಚಾಂತ ಚುಂಬಿಸುತ್ತಿದ್ದರಲ್ಲ?' ಅಂತಾನೆ!''

''ಮಾರ್ಫಾಳಿಗೆ ಮುತ್ತಿಡುವುದಕ್ಕಿಂತ ಟರ್ಕಿಹುಂಜಕ್ಕೆ ಮುತ್ತಿಟ್ಟೇನು! ನನಗೆ ಹೆಂಡತಿ ಇದ್ದಾಳೆ ಕಣೊ ಹಂದಿ.'' ಅಂದೆ. ''ಒಳ್ಳೆ ತಮಾಷಿ ಹುಡುಗ!''

''ಯಾರಪ್ಪ ನಿನಗೆ ತಮಾಷೆ ಮಾಡಿದ್ದು?'' ಭಾನುವಾರದ ಬೈಬಲ್ ತರಗತಿ ನಡೆಸುತ್ತಿದ್ದ ಪಾದ್ರಿ ಅವರನ್ನು ಸೇರಿಕೊಳ್ಳುತ್ತಾ ಕೇಳಿದರು.

''ಬೇರೆ ಯಾರೂ ಅಲ್ಲ, ನಮ್ಮ ವ್ಯಾಂಕಿನ್ ಮಹಾಶಯ! ಏನಾಯ್ತು ಅಂದರೆ...'' ಅಹಿನೀವ್ ಮತ್ತೆ ಶುರು ಹಚ್ಚಿಕೊಂಡ.

ಮುಂದಿನ ಅರ್ಧ ಗಂಟೆಯೊಳಗೆ ನಡುಕೋಣೆಯಲ್ಲಿ ನೆರೆದಿದ್ದ ಎಲ್ಲರಿಗೂ ಅಹಿನಿವ್ ಮಾಸ್ತರರ ಚುಂಬನದ ವಿಚಾರ ಗೊತ್ತಾಗಿಬಿಟ್ಟಿತು.

'ಸತ್ಯ ಸಂಗತಿ ಎಲ್ಲರಿಗೂ ಹೇಳಿದ್ದೀನಿ. ವ್ಯಾಂಕಿನನ ಆಟ ಮುಗೀತು. ಜನ ಏನೂ ದಡ್ಡರಲ್ಲ. ಅವನಿಗೇ ಉಗಿದು ಕಳಿಸುತ್ತಾರೆ!' ಎಂದುಕೊಂಡ ಅಹಿನಿವ್ ಮಾಸ್ತರರಿಗೆ ಸಮಾಧಾನವಾಯಿತು. ಯಾವುದೋ ದೊಡ್ಡದಾದ ಭಾರ ತಲೆಯ ಮೇಲಿಂದ ಕಳಚಿಕೊಂಡು ಹಗುರವಾದಂತಾಗಿ ತುಸು ಹೆಚ್ಚೇ ವೋಡ್ಕಾ ಇಳಿಸಿದರು. ಎಲ್ಲರಿಗೂ ಊಟ ಮಾಡಿಸಿ ಕಳಿಸಿದ ನಂತರ ಹೋಗಿ ಸಣ್ಣ ಮಗುವಿನಂತೆ ನಿದ್ದೆ ಹೋದರು. ಮಾರನೆಯ ದಿನ ಎದ್ದಾಗ ಅವರಿಗೆ ಈ ಘಟನೆಯ ಬಗ್ಗೆಯಾಗಲಿ ಸ್ಟರ್ಜನ್ ಮೀನಿನ ಬಗ್ಗೆಯಾಗಲಿ ಕಿಂಚಿತ್ತೂ ಜ್ಞಾಪಕಕ್ಕೆ ಬರಲಿಲ್ಲ.

ಆದರೆ ದೈವಲೀಲೆಯೇ ಬೇರೆಯಾಗಿತ್ತು.

ವಿಷಪೂರಿತ ನಾಲಿಗೆಯ ಮುಂದೆ ಅಹಿನೀವರ ಆಟ ಸಾಗಲಿಲ್ಲ.

ಸರಿಯಾಗಿ ಒಂದು ವಾರದ ನಂತರ, ಅಂದರೆ ಬುಧವಾರದಂದು, ಅಹಿನೀವ್ ಮೂರನೇ ಪೀರಿಯಡ್ ಮುಗಿಸಿಕೊಂಡು ಒಬ್ಬ ವಿದ್ಯಾರ್ಥಿಯ ಬಳಿ ಮಾತನಾಡುತ್ತಾ ಸ್ಟಾಫ್ ರೂಮಿನ ಬಾಗಿಲ ಬಳಿ ನಿಂತಿದ್ದರು. ಅಲ್ಲಿಗೆ ಬಂದ ಮುಖ್ಯೋಪಾಧ್ಯಾಯರು ಅವರನ್ನು ಬದಿಗೆ ಕರೆಸಿಕೊಂಡರು.

''ನೋಡಪ್ಪ ಸರ್ಗೆಯ್ ಕಪಿತಾನೊವಿಚ್, ಅನ್ಯಥಾ ಭಾವಿಸಬೇಡ. ಇದು ನನಗೆ ಸಂಬಂಧಿಸಿದ್ದಲ್ಲವಾದರೂ ಹೇಳುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ. ಎಲ್ಲರ ಬಾಯಲ್ಲೂ ನಿನ್ನದೇ ಮಾತು! ನನಗೇನೂ ಆಗಬೇಕಿಲ್ಲ... ಆದರೂ, ನಿನ್ನ ಮತ್ತು ಅದು ಯಾರೋ ಅಡುಗೆಯವಳಂತೆ! ಪ್ರಣಯದ ಬಗ್ಗೆಯೇ ಎಲ್ಲರು ಮಾತನಾಡುತ್ತಿದ್ದಾರೆ... ರಾಜಾರೋಷವಾಗಿ